

# ಅಪರಿಚಿತ ಬ್ರೆಟ್ ಲೀ!

ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಬ್ರೆಟ್ ಲೀ, ಮೈದಾನದಿಂದ ಹೊರಬಂದು ಕ್ಯಾಮೆರಾ ಮುಂದೆ ನಿಂತವನು. ಕ್ರಿಕೆಟ್ ನಂಟಿನಿಂದಲೇ ಬಾಲಿವುಡ್ ಸಂಪರ್ಕಕ್ಕೂ ಬಂದಿದ್ದ ಬ್ರೆಟ್ ಲೀ, ಈಗ ಸಿನಿಮಾ ನಾಯಕ ಕೂಡ. ಬ್ರೆಟ್ ಲೀ ನಟಿಸಿರುವ 'ಅನ್ ಇಂಡಿಯನ್' ಚಿತ್ರ ಆಸ್ಟ್ರೇಲಿಯಾದಲ್ಲಿ ತಿಂಗಳ ಹಿಂದೆಯೇ ಬಿಡುಗಡೆಯಾಗಿತ್ತು. ಭಾರತದಲ್ಲಿಯೂ ಈಗ ಅದಕ್ಕೆ ಬಿಡುಗಡೆ ಭಾಗ್ಯ ದೊರೆತಿದೆ. ಬಾಲಿವುಡ್‌ಗೆ ಕಾಲಿಡುವ ಮುನ್ನವೇ ಅನೇಕ ಭಾರತೀಯರಿಗೆ ಬ್ರೆಟ್ ಲೀ ಪರಿಚಿತ. ನಗುಮೊಗದ ಕ್ರಿಕೆಟಿಗನಿಗೆ ಭಾರತದಲ್ಲೂ ಅಪಾರ ಅಭಿಮಾನಿಗಳಿದ್ದಾರೆ. ಆದರೆ 'ಅನ್ ಇಂಡಿಯನ್' ಚಿತ್ರದ ನಾಯಕಿ ತನಿಷ್ಠಾ ಮುಖರ್ಜಿಗೆ ಬ್ರೆಟ್ ಲೀ ಕುರಿತು ಗೊತ್ತೇ ಇರಲಿಲ್ಲವಂತೆ!



ತನ್ನೊಂದಿಗೆ ನಟಿಸಲಿರುವಾತ ಆಸ್ಟ್ರೇಲಿಯಾದ ನಟ ಎಂದುಕೊಂಡಿದ್ದಳಂತೆ ತನಿಷ್ಠಾ. ಕ್ರಿಕೆಟಿಗ ಬ್ರೆಟ್ ಲೀ ತನ್ನೊಂದಿಗೆ ತೆರೆ ಹಂಚಿಕೊಳ್ಳುತ್ತಿರುವುದು ಎಂದು ಗೊತ್ತಾದಾಗ ಆಕೆಗೆ ಅಚ್ಚರಿಯಾಯಿತಂತೆ. ಆದರೆ ಬ್ರೆಟ್ ಲೀ ಮೂಲಕ ಆಕೆಗೆ ಉತ್ತಮ ಗೆಳೆಯನೊಬ್ಬ ದೊರೆಕಿದ್ದಾನೆ. ಬ್ರೆಟ್ ಲೀ ಜತೆ ಕೆಲಸ ಮಾಡಿದ ಅನುಭವ ಅದ್ಭುತ. ಆತನೊಬ್ಬ ತಮಾಷೆಯ ವ್ಯಕ್ತಿತ್ವದ, ಒಳ್ಳೆಯ ಮನಸಿನ ವ್ಯಕ್ತಿ ಎಂದು ಹೊಗಳಿದ್ದಾಳೆ ತನಿಷ್ಠಾ.

ಕ್ರಿಕೆಟ್ ಬಗ್ಗೆ ಹೆಚ್ಚೇನು ತಿಳಿಯದೇ ಇದ್ದಿದ್ದರಿಂದಲೇ ನಮ್ಮಿಬ್ಬರ ನಡುವಣ ಕೆಮಿಸ್ಟ್ರಿ ಚೆನ್ನಾಗಿ ಕೆಲಸ ಮಾಡಿದೆ ಎನ್ನುವುದು ಆಕೆಯ ಅಭಿಪ್ರಾಯ. ಏಕೆಂದರೆ, ಒಂದು ವೇಳೆ ಆತನ ಅಭಿಮಾನಿಯಾಗಿದ್ದರೆ ಆತನೆದುರು ನಟಿಸುವುದು ಕಷ್ಟವಾಗುತ್ತಿತ್ತು. ಈ ಹಿಂದೆ ಜಾಹೀರಾತುಗಳಷ್ಟೇ ಲೀಯನ್ನು ನೋಡಿದ್ದೆ. ಕ್ರಿಕೆಟ್‌ನಿಂದ ದೂರವಿದ್ದಿದ್ದರಿಂದ ಆತನೊಂದಿಗೆ ಸ್ನೇಹ ಹೊಂದಲು ಮತ್ತು ಆರಾಮಾಗಿ ಕೆಲಸ ಮಾಡಲು ಸಾಧ್ಯವಾಯಿತು ಎಂದಿದ್ದಾಳೆ ಆಕೆ.



# ಮಗಳ ಯಶಸ್ಸು, ಅಪ್ಪನ ಖುಷಿ

ಅಲಿಯಾ ಭಟ್ ನಟಿಸಿದ ಮೊದಲ ಸಿನಿಮಾ 'ಸ್ಟೂಡೆಂಟ್ ಆಫ್ ದಿ ಇಯರ್' ಯಶಸ್ಸು ಕಂಡರೂ ಆಕೆ ನಟನೆಯಲ್ಲಿ ಅಷ್ಟಾಗಿ ಪಳಗಿರಲಿಲ್ಲ. ಐದು ವರ್ಷದ ವೃತ್ತಿ ಬದುಕಿನಲ್ಲಿ 'ಹೈವೇ' ಚಿತ್ರದಲ್ಲಿನ ಅಭಿನಯ ಅಚ್ಚರಿ ಮೂಡಿಸಿತ್ತು. 'ಟೂ ಸ್ಟೇಟ್ಸ್', 'ಹಂಪ್ಟಿ ಶರ್ಮಾ ಕಿ ದುಲ್ಹನಿಯಾ', 'ಕಪೂರ್ ಆ್ಯಂಡ್ ಸನ್ಸ್', 'ಉಡ್ತಾ ಪಂಜಾಬ್' ಚಿತ್ರಗಳು ಆಕೆಗೆ ಸಾಲು ಸಾಲು ಗೆಲುವನ್ನು ನೀಡಿವೆ. ಅಲಿಯಾ ಈಗ ಆಯ್ದುಕೊಳ್ಳುತ್ತಿರುವ ಪಾತ್ರಗಳು ಆಕೆಯ ನಟನಾ ಕೌಶಲಕ್ಕೆ ಸವಾಲು ಒಡ್ಡುವಂತಿವೆ. ಮಗಳ ಯಶಸ್ಸು ತಂದೆ ಮಹೇಶ್ ಭಟ್‌ಗೆ ಹೆಮ್ಮೆ ಮೂಡಿಸಿದೆ. ಆದರೆ, ಗೆಲುವು ನಮ್ಮನ್ನು ಮೈಮರೆಸುತ್ತದೆ ಎನ್ನುವುದು ಭಟ್ ಅಭಿಪ್ರಾಯ. ಹೀಗಾಗಿ ಆಕೆ ಕೆಲವು ಸೋಲುಗಳ ಅನುಭವವನ್ನೂ ಪಡೆದುಕೊಳ್ಳಬೇಕು ಎಂದಿದ್ದಾರೆ ಅವರು.

''ಉತ್ತಮ ಪ್ರತಿಭಾವಂತ ನಟಿ ಎನಿಸಿಕೊಳ್ಳುತ್ತಾ ಹೆಜ್ಜೆ ಇರಿಸಿದ ಆಕೆ 'ಉಡ್ತಾ ಪಂಜಾಬ್' ವೇಳೆಗೆ ಅದ್ಭುತ ನಟಿ ಎನಿಸಿಕೊಂಡಿದ್ದಾಳೆ. ಆಕೆಯಲ್ಲಿನ ಈ 'ಭಾವನಾತ್ಮಕ ಬುದ್ಧಿವಂತಿಕೆ' ಎಲ್ಲಿಂದ ಬಂತೋ ನನಗೆ ಗೊತ್ತಿಲ್ಲ. ಆ ಚಿತ್ರದಲ್ಲಂತೂ ಆಕೆ ನನ್ನನ್ನು ಅಚ್ಚರಿಗೊಳಿಸಿದ್ದಳು' ಎಂದಿದ್ದಾರೆ ಭಟ್.

'ನಾನು ಕಲ್ಪಿಸಿಕೊಂಡಿದ್ದಕ್ಕಿಂತಲೂ ಅಲಿಯಾ ಈ ವಯಸ್ಸಿನಲ್ಲಿ ಯಶಸ್ಸು ಗಳಿಸಿದ್ದಾಳೆ. ಆಕೆ ತನ್ನ ಸ್ವಂತ ಬದುಕಿನಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಅರಿತುಕೊಂಡಿದ್ದಾಳೆ. ತನ್ನ ಹಡಗಿಗೆ ಆಕೆಯೇ ನಾವಿಕಳು' ಎನ್ನುತ್ತಾರೆ ಭಟ್. ಮಗಳ ವೃತ್ತಿ ಬದುಕಿನ ಆಯ್ಕೆಯೊಳಗೆ ತಾವು ಹಸ್ತಕ್ಷೇಪ ಮಾಡುವುದಿಲ್ಲ ಎಂಬುದನ್ನು ಹೇಳುವ ಅವರು, ಬಿಟೌನ್‌ನ ನಟಿಯರೆಲ್ಲ ಹಾಲಿವುಡ್ ಹಾದಿ ಹಿಡಿಯುತ್ತಿರುವಾಗ, ತಮ್ಮ ಮಗಳೂ ವಿಮಾನ ಹತ್ತಿದರೆ, ತಂದೆಯಾಗಿ ಪ್ರೋತ್ಸಾಹ ನೀಡುತ್ತೇನೆ ಎಂದಿದ್ದಾರೆ.